# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 458 |
| ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 30.01.2026. |
| ಉತ್ತರಿಸುವವರು | : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯತಿಗಳ ಆಡಳಿತ ನಿರ್ವಹಣೆಗೆ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಅವಧಿ ಯಾವಾಗ ಮುಕ್ತಾಯಗೊಳ್ಳಲಿದೆ; ಈ ಪೈಕಿ ಎಷ್ಟು ಗ್ರಾಮ ಪಂಚಾಯತಿಗಳಲ್ಲಿ ಆಡಳಿತಾಧಿಕಾರಿಗಳನ್ನು (Administrator) ನೇಮಕ ಮಾಡಲು ಪ್ರಕ್ರಿಯೇ ಪ್ರಾರಂಭಿಸಿದೆ; ಗ್ರಾಮ ಪಂಚಾಯತಿಗಳಿಗೆ ನೇಮಿಸಲಾಗುವ ಆಡಳಿತಾಧಿಕಾರಿಗಳಿಗೆ ಗ್ರಾಮ ಪಂಚಾಯತಿ ಆಡಳಿತದ ಬಗ್ಗೆ ತರಬೇತಿ ನೀಡಲಾಗಿದೆಯೇ; | 2026ರ ಜನವರಿ ತಿಂಗಳಿನಲ್ಲಿ 1116, ಫೆಬ್ರವರಿ ತಿಂಗಳಿನಲ್ಲಿ 4557, ಮಾರ್ಚ್ ತಿಂಗಳಿನಲ್ಲಿ 12, ಏಪ್ರಿಲ್ ತಿಂಗಳಿನಲ್ಲಿ 27, ಮೇ ತಿಂಗಳಿನಲ್ಲಿ 7, ಜೂನ್ ತಿಂಗಳಿನಲ್ಲಿ 2, ಮತ್ತು ಜುಲೈ ತಿಂಗಳಿನಲ್ಲಿ 7 ಗ್ರಾಮ ಪಂಚಾಯಿತಿಗಳು ಸೇರಿದಂತೆ ಒಟ್ಟು 5728 ಗ್ರಾಮ ಪಂಚಾಯಿತಿಗಳ ಅವಧಿಯು ಮುಕ್ತಾಯವಾಗಲು ಪ್ರಾರಂಭವಾಗಿರುವುದರಿಂದ, ಗ್ರಾಮ ಪಂಚಾಯಿತಿಗಳಲ್ಲಿ ಪರಿಪೂರ್ಣವಾದ ಆಡಳಿತಾತ್ಮಕ ವ್ಯವಸ್ಥೆಯ ಕೊರತೆ ಉಂಟಾಗಿ (Administrative Vacum), ದೈನಂದಿನ ಕಾರ್ಯನಿರ್ವಹಣೆಗೆ ಬಾಧಕ ಉಂಟಾಗುವುದರಿಂದ ಅಧಿನಿಯಮದ ಪ್ರಕರಣ 8 ರಡಿಯ ಉಪಬಂಧಗಳನುಸಾರ ಗ್ರಾಮ ಪಂಚಾಯಿತಿಗಳ ಅವಧಿ ಮುಕ್ತಾಯಗೊಂಡ ನಂತರ ಆಡಳಿತಾಧಿಕಾರಿಗಳನ್ನು ನೇಮಿಸಿ ಅಧಿಸೂಚಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪಂ 1003 ಗ್ರಾಪಂಅ 2025, ದಿನಾಂಕ:16.01.2026ರಂದು ನಿರ್ದೇಶನ ನೀಡಲಾಗಿದೆ. ಅದರ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ವಹಿಸಿರುತ್ತಾರೆ. ಗ್ರಾಮ ಪಂಚಾಯತಿಗಳಿಗೆ ನೇಮಕಗೊಂಡ ಆಡಳಿತಾಧಿಕಾರಿಗಳಿಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ರವರಿಂದ ತರಬೇತಿ ನೀಡಲು ಕ್ರಮ ವಹಿಸಲಾಗುತ್ತಿದೆ. |
| (ಆ) | ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ "ಆಡಳಿತಾಧಿಕಾರಿಗಳ ನೇಮಕ" ಮತ್ತು "ಆಡಳಿತ ಸಮಿತಿ" (Administrative Committee) ನೇಮಕ- ಈ ಎರಡರ ಪೈಕಿ ಆಡಳಿತಾತ್ಮಕವಾಗಿ ಯಾವುದು ಹೆಚ್ಚು ಪರಿಣಾಮಕಾರಿಯೆಂದು ಸರ್ಕಾರ ಪರಿಗಣಿಸಿದೆ; ಈ ಕುರಿತು ಸರ್ಕಾರದ ನಿಲುವೇನು; | ಆಡಳಿತ ಸಮಿತಿಯನ್ನು ರಚಿಸಲು ಆಡಳಿತಾತ್ಮಕವಾಗಿ ಸಮಸ್ಯೆ ಉಂಟಾಗುವುದರಿಂದ ಹಾಗೂ ಗ್ರಾಮ ಪಂಚಾಯತಿಗಳ ಅವಧಿ ಮುಗಿಯುವುದರಿಂದ ಗ್ರಾಮ ಪಂಚಾಯತಿಗಳ ದೈನಂದಿನ ಕಾರ್ಯಚಟುವಟಿಕೆಗೆ ತೊಂದರೆಯಾಗದಿರಲು ಆಡಳಿತ ಅಧಿಕಾರಿಗಳನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ. |

| | | |
|---|---|---|
| (ಇ) | ಗ್ರಾಮ ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳ ನೇಮಕದ ಬದಲಾಗಿ ಈಗಿರುವ ಆಡಳಿತ ಮಂಡಳಿಯನ್ನೇ ಅಲ್ಪಾವಧಿಗೆ ಮುಂದುವರಿಸುವಂತೆ ಜನಪ್ರತಿನಿಧಿಗಳು ಮತ್ತು ಪಂಚಾಯತ್ ರಾಜ್ ಒಕ್ಕೂಟದ ಪದಾಧಿಕಾರಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ; ಈ ಕುರಿತು ಸರ್ಕಾರ ವಹಿಸುವ ಕ್ರಮಗಳೇನು: | ಹೌದು.<br><br>ಭಾರತ ಸಂವಿಧಾನದ ಅನುಚ್ಛೇದ 243ಇ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 41ರ ಉಪಬಂಧಗಳನ್ವಯ, 2021-26ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಚುನಾಯಿತರಾಗಿರುವ ಗ್ರಾಮ ಪಂಚಾಯಿತಿ ಸದಸ್ಯರ 05 ವರ್ಷಗಳ ಅವಧಿಯು ಮುಕ್ತಾಯಗೊಂಡ ನಂತರ, ಅವರುಗಳನ್ನೇ ಅಧಿನಿಯಮದ ಪ್ರಕರಣ 8(ಬಿ) (i) ರನ್ವಯ ನೂತನ ಆಡಳಿತ ಸಮಿತಿಯಾಗಿ ಮುಂದುವರೆಸಲು ಅವಕಾಶವಿರುವುದಿಲ್ಲ. |
| (ಈ) | ಆಡಳಿತಾಧಿಕಾರಿಗಳ ನೇಮಕದ ಬದಲಾಗಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್, ಅಧಿನಿಯಮದಡಿ ಗ್ರಾಮ ಪಂಚಾಯತಿಗಳ ಆಡಳಿತ ನಿರ್ವಹಣೆಗೆ "ಆಡಳಿತ ಸಮಿತಿ" (Administrative Committee) ಯನ್ನು ನೇಮಕ ಮಾಡಲು ಅವಕಾಶವಿದೆಯೇ; ಅವಕಾಶವಿದ್ದರೆ ಮುಂದಿನ ದಿನಗಳಲ್ಲಿ ಯಾವ ಕಾಲಮಿತಿಯೊಳಗೆ ಆದೇಶ ಹೊರಡಿಸಲಾಗುವುದು; | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 8 ರಡಿ ಗ್ರಾಮ ಪಂಚಾಯಿತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದ್ದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕದ ಬಗ್ಗೆ ತಿಳಿಸಲಾಗಿದೆ.<br><br>ಗ್ರಾಮ ಪಂಚಾಯಿತಿಗಳ ಅವಧಿಯು ಮುಕ್ತಾಯವಾಗಲು ಪ್ರಾರಂಭವಾಗಿರುವುದರಿಂದ, ಗ್ರಾಮ ಪಂಚಾಯಿತಿಗಳಲ್ಲಿ ಪರಿಪೂರ್ಣವಾದ ಆಡಳಿತಾತ್ಮಕ ವ್ಯವಸ್ಥೆಯ ಕೊರತೆ ಉಂಟಾಗಿ (Administrative Vacum), ದೈನಂದಿನ ಕಾರ್ಯನಿರ್ವಹಣೆಗೆ ಬಾಧಕ ಉಂಟಾಗುವುದರಿಂದ ಅಧಿನಿಯಮದ ಪ್ರಕರಣ 8 ರ ಉಪಬಂಧಗಳನುಸಾರ ಗ್ರಾಮ ಪಂಚಾಯಿತಿಗಳ ಅವಧಿ ಮುಕ್ತಾಯಗೊಂಡ ನಂತರ ಆಡಳಿತಾಧಿಕಾರಿಗಳನ್ನು ನೇಮಿಸಿ ಅಧಿಸೂಚಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 1003 ಗ್ರಾಪಂಅ 2025, ದಿನಾಂಕ:16.01.2026ರಂದು ನಿರ್ದೇಶನ ನೀಡಲಾಗಿದೆ. |
| (ಉ) | ಸುಗಮ ಆಡಳಿತ ಮತ್ತು ಸ್ಥಳೀಯ ಜನಪ್ರತಿನಿಧಿಗಳ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಉದ್ದೇಶದಿಂದ ಈಗಿರುವ ಗ್ರಾಮ ಪಂಚಾಯತಿ ಸದಸ್ಯರನ್ನೇ "ಆಡಳಿತ ಸಮಿತಿ"ಗೆ (Administrative Committee) ನೇಮಕ ಮಾಡುವ ಬಗ್ಗೆ ಸರ್ಕಾರದ ನಿಲುವೇನು; ಈ ಕುರಿತು ಜಿಲ್ಲಾವಾರು ಮಾರ್ಗಸೂಚಿ/ಆದೇಶವನ್ನು ಹೊರಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಭಾರತ ಸಂವಿಧಾನದ ಅನುಚ್ಛೇದ 243ಇ ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 41ರ ಉಪಬಂಧಗಳನ್ವಯ, 2021-26ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಚುನಾಯಿತರಾಗಿರುವ ಗ್ರಾಮ ಪಂಚಾಯಿತಿ ಸದಸ್ಯರ 05 ವರ್ಷಗಳ ಅವಧಿಯು ಮುಕ್ತಾಯಗೊಂಡ ನಂತರ, ಅವರುಗಳನ್ನೇ ಅಧಿನಿಯಮದ ಪ್ರಕರಣ 8(ಬಿ) (i) ರನ್ವಯ ನೂತನ ಆಡಳಿತ ಸಮಿತಿಯಾಗಿ ಮುಂದುವರೆಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಗ್ರಾಅಪ 104 ಗ್ರಾಪಂಅ 2026

**(ಈಶ್ವರ ಬಿ. ಖಂಡ್ರೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.